

# ಗಿಫ್ಟ್, ರಿಟರ್ನ್ ಗಿಫ್ಟ್‌ಗಳ ವರ್ತುಲದಲ್ಲಿ...

**ಈಗ ಕಾಣಿಕೆ ಪಡೆಯುವುದು ಮಾತ್ರವಲ್ಲ, ಮರುಕಾಣಿಕೆ ನೀಡುವುದು ಕೂಡ ಪದ್ಧತಿಯೇ ಆಗಿದೆ. ಅದಕ್ಕಾಗಿ ನಡೆಯುವ ಕಸರತ್ತುಗಳು ಒಂದೆರಡಲ್ಲ...**

■ **ಜ್ಯೋತಿ ಡಿ. ಬೊಮ್ಮಾ**

ಮನೆಯ ಶುಭ ಸಮಾರಂಭಕ್ಕೆ ಬರುವ ಅತಿಥಿಗಳಿಗೆ 'ರಿಟರ್ನ್ ಗಿಫ್ಟ್' ಏನು ಕೊಡುವುದೆಂದು ಯೋಚಿಸಿ ತಲೆಕೆಟ್ಟು, ಯಾವುದೇ ನಿರ್ಧಾರಕ್ಕೆ ಬರಲಾಗದೆ ವಾರವಿಡೀ ಒದ್ದಾಡಿದ್ದಾಗಿತ್ತು. ಯಾವ ವಸ್ತು ಕೊಟ್ಟರೆ ಚೆಂದ ಎಂದು ಗೆಳತಿಯರೊಂದಿಗೆ ಒಂದೊಂದು ಗಂಟೆ ಮಾತಾಡಿದ್ದೇ ಮಾತಾಡಿದ್ದು. ಅವರು ಅದು ಕೊಟ್ಟರು, ಇವರು ಇದು ಕೊಟ್ಟರು, ಇಂಥ ವಸ್ತುಗಳು ಇಂತಲ್ಲಿ ಸಿಗುತ್ತವೆ, ಅಲ್ಲಿ ಬೆಲೆ ಕಮ್ಮಿ, ಇಲ್ಲಿ ಕ್ವಾಲಿಟಿ ಚೆಂದ... ಸಮಾರಂಭದ ದಿನ ಹತ್ತಿರ ಬಂದರೂ ಕೊಡುವ ವಸ್ತು ಯಾವುದೆಂದು ಮಾತ್ರ ನಿರ್ಧಾರವಾಗಲಿಲ್ಲ. ಕೊನೆಗೆ ತಂಗಿಗೆ ಅದರ ಹೊಣೆ ಬಿಟ್ಟು ನಿರಾಳಗೊಂಡೆ.

ರಿಟರ್ನ್ ಗಿಫ್ಟ್‌ಗಳ ಹಾವಳಿ ಶುರುವಾದದ್ದು ಈಚೆಗೆ. ಮೊದಲು, ಯಾರ ಮನೆಯಲ್ಲಿ ಸಮಾರಂಭವೋ ಅವರಿಗೆ ಮಾತ್ರ ಕಾಣಿಕೆ ಕೊಡುವ ಪದ್ಧತಿಯಿತ್ತು. ಇತ್ತೀಚೆಗೆ ಕಾಣಿಕೆ ಕೊಟ್ಟವರಿಗೆ ತಿರುಗಿ ಕಾಣಿಕೆ ಕೊಡುವ ಪದ್ಧತಿ ಶುರುವಾಗಿದೆ. ನಮ್ಮ ಕರೆಗೆ ಓಗೊಟ್ಟು ಕಾಣಿಕೆಯೊಂದಿಗೆ ಬರುವ ಅತಿಥಿಗಳನ್ನು ಬರಿಗೈಯಲ್ಲಿ ಕಳಿಸಿದರೆ ಅವಮಾನ ಎಂಬ ಧೋರಣೆ 'ರಿಟರ್ನ್ ಗಿಫ್ಟ್'ಗಳ ಹುಟ್ಟಿಗೆ ಕಾರಣ.

ಸ್ನೇಹ, ವಾತ್ಸಲ್ಯ ಪ್ರಸ್ತುತಪಡಿಸುವ ವಿಷಯ ಉಡುಗೊರೆಯಾಗಿತ್ತು. ಮತ್ತೊಬ್ಬರನ್ನು ಪ್ರೋತ್ಸಾಹಿಸಲು, ಅಭಿನಂದಿಸಲು, ಪ್ರೀತಿ ಅಭಿವ್ಯಕ್ತಪಡಿಸಲು ನೀಡುತ್ತಿದ್ದ ಕಾಣಿಕೆಯೀಗ ವ್ಯಾವಹಾರಿಕ ರೂಪ ಪಡೆದುಕೊಂಡಿದೆ.

ಕಾಣಿಕೆಗಳು ಸನ್ನಿವೇಶಕ್ಕೆ ಅನುಗುಣವಾಗಿರುತ್ತವೆ. ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ, ಗೃಹಪ್ರವೇಶ – ಸಮಾರಂಭಗಳ ಪಟ್ಟಿ ಬೆಳೆದಂತೆ ಗಿಫ್ಟ್, ರಿಟರ್ನ್ ಗಿಫ್ಟ್‌ಗಳ ವೈವಿಧ್ಯ ಕೂಡ ಬೆಳೆದಿದೆ. ಸಮಾರಂಭದ ಆಮಂತ್ರಣದಲ್ಲಿ 'ನಿಮ್ಮ ಆಗಮನವೇ ಉಡುಗೊರೆ' ಎಂದು ಬರೆದಿದ್ದರೂ ಸುಮ್ಮನೇ ಹೋಗಲಾದೀತೆ? ಎಂಬ ಭಾವ ಹಲವರದ್ದು. ಸಮಾರಂಭಕ್ಕೆ ಬಂದವರ ಕೈಗಳಲ್ಲಿ ಏನಾದರೊಂದು ವಸ್ತು ಕಾಣಿಸಿದರಂತೂ ಖಾಲಿ ಕೈಯಲ್ಲಿ ಬಂದ ಅಪರಾಧಪ್ರಜ್ಞೆ!

ನಮ್ಮ ಉತ್ತರ ಕರ್ನಾಟಕದ ಕಲಬುರಗಿ ಮತ್ತು ಬೀದರ್ ಕಡೆ ಕಾಣಿಕೆ ಕೊಡುವುದರಲ್ಲಿ, ತಿರುಗಿ ಕಾಣಿಕೆ ಪಡೆಯುವುದರಲ್ಲಿ ಸೀರೆಗೆ ಅಗ್ರಸ್ಥಾನ. ಯಾರದೇ ಮನೆಯಲ್ಲಿ ಏನೇ ಸಮಾರಂಭವಿರಲಿ, ಒಂದು ಸೀರೆಯನ್ನು ಕ್ಯಾರಿಬ್ಯಾಗ್‌ನಲ್ಲಿ ಹಾಕಿಕೊಟ್ಟರೆ ಅದೇ ಗಿಫ್ಟ್. ಎಲ್ಲರೂ ತಂದ ಸೀರೆಗಳನ್ನು ಒಟ್ಟು ಮಾಡಿ ಬಂದವರಿಗೆಲ್ಲ ರಿಟರ್ನ್ ಗಿಫ್ಟ್‌ಗಳಾಗಿ ಅವೇ ಸೀರೆ ಕೊಡುವುದೂ ಉಂಟು.

ಕೆಲವೊಮ್ಮೆ ಅಸಮಾಧಾನ ಭುಗಿಲೇಳುತ್ತದೆ ನಮ್ಮ ಹೆಂಗಳೆಯರಲ್ಲಿ. ನಾವು ಉತ್ತಮ ಸೀರೆ ಕಾಣಿಕೆ ಕೊಟ್ಟಾಗ ಆ ಕಡೆಯಿಂದ ಸಾಧಾರಣ ಸೀರೆ ರಿಟರ್ನ್ ಗಿಫ್ಟ್ ಬಂದರೆ! ಅದಕ್ಕೀಗ, ಅವರವರ ಸೀರೆಯನ್ನು ಅವರವರಿಗೆ ರಿಟರ್ನ್ ಗಿಫ್ಟ್ಆಗಿ ಕೊಡುವುದೇ ಒಳಿತೆಂದು ನಾವು ಒಯ್ದ ಸೀರೆಯನ್ನು ಅರಿಶಿನ ಕುಂಕುಮದೊಂದಿಗೆ ನಮಗೇ ವಾಪಸ್ ಕೊಡುತ್ತಾರೆ. ಈಗ ಅಸಮಾಧಾನಕ್ಕೆ ಆಸ್ಪದವೆಲ್ಲಿ!

ಕಾಣಿಕೆ ರೂಪದಲ್ಲಿ ಕೊಟ್ಟ, ಪಡೆದ ಸೀರೆಗಳಿಂದ ಕಪಾಟು ಮಾತ್ರ ಭರ್ತಿ ಆಗುವುದರಿಂದ ಸೀರೆಗಳ ಬದಲಿಗೆ ವಸ್ತು ವಿನಿಮಯ ಪದ್ಧತಿ ಬಂತು. ಅಲ್ಲೂ ತಾಕಲಾಟ ತಪ್ಪಿದ್ದಲ್ಲ. ಎಂಥ ವಸ್ತು ಕೊಡಬೇಕು, ಗೃಹೋಪಯೋಗಿ ವಸ್ತುಗಳೇ, ಗೃಹಾಲಂಕಾರಿಕ ವಸ್ತುಗಳೇ, ಏನು ಕೊಟ್ಟರೆ ಅವರಿಗೆ ಉಪಯೋಗ? ಹೀಗೆ ಯೋಚನೆ ಬೆಳೆಯುತ್ತಾ ಹೋಗುತ್ತದೆ.

ನಮ್ಮ ಮನೆಯಲ್ಲಿರುವ ವಸ್ತುಗಳೇ ಗಿಫ್ಟ್ ರೂಪದಲ್ಲಿ ಬಂದರೆ ಏನು ಮಾಡುವುದು? ಅದನ್ನು ಮತ್ತೊಬ್ಬರಿಗೆ ರವಾನಿಸಬೇಕಷ್ಟೆ. ಈಗ ಎಲ್ಲರ ಮನೆಯಲ್ಲೂ ಅವರವರ ಆಸಕ್ತಿಗೆ ತಕ್ಕಂತೆ ಮೊದಲೇ ವಸ್ತುಗಳನ್ನು ಕೊಂಡಿರುವುದರಿಂದ ಗಿಫ್ಟ್, ರಿಟರ್ನ್ ಗಿಫ್ಟ್‌ಗಳು ಹತ್ತರೊಳಗೆ ಹನ್ನೊಂದು.

ನಮ್ಮ ಕಡೆ ಹೆಣ್ಣುಮಕ್ಕಳಿಗೆ ಮದುವೆಯಲ್ಲಿ 'ರುಕವತ್' ಎಂದು ಗೃಹೋಪಯೋಗಿ ವಸ್ತುಗಳನ್ನು ಕೊಡುವುದು ವಾಡಿಕೆ. ಕಲ್ಯಾಣ ಮಂಟಪದ ಒಂದು ಕಡೆ ಅವನ್ನು ಇಡಲಾಗುತ್ತದೆ. ಮದುವೆಗೆ ಬಂದವರು ವಧುವರರನ್ನು ನೋಡುವುದಕ್ಕಿಂತ ಮಗಳಿಗೆ ಏನೇನು ಕೊಡುತ್ತಿದ್ದಾರೆಂದು ನೋಡುವುದೇ ಹೆಚ್ಚು. ವಧುವಿನೊಂದಿಗೆ ಈ ಸಾಮಗ್ರಿಗಳೆಲ್ಲ ಅವಳ ಗಂಡನ ಮನೆ ಸೇರುತ್ತವೆ. ಆದರೆ ಈಗ ವರನ ಕಡೆಯವರಿಗೆ ಈ ಕಾಣಿಕೆಗಳೇ ಬೇಡವಾಗಿವೆ. ಈಗಾಗಲೇ ಮನೆಯಲ್ಲಿ ದಂಡಿಯಾಗಿರುವ ವಸ್ತುಗಳಿಗೇ ಸ್ಥಳವಿಲ್ಲದಾಗ ಸೊಸೆ ತಂದ ವಸ್ತುಗಳನ್ನೆಲ್ಲಿಡುವುದು?

ಹೊಸ ಸಂಸಾರವಾದರೂ, ತಮಗೆ ಅತೀ ಅಗತ್ಯ ವಸ್ತುಗಳನ್ನು ಮಾತ್ರ ಖರೀದಿಸುತ್ತಾರೆ. ಮನೆಯಲ್ಲಿ ವಸ್ತುಗಳು ಕಡಿಮೆಯಿದ್ದಷ್ಟು ಕೆಲಸವೂ ಕಡಿಮೆ ಎಂಬ ಭಾವ.

ಈ ನಡುವೆ ಉಡುಗೊರೆ ರೂಪದಲ್ಲಿ ಕೊಡುವ, ಪಡೆಯುವ ವಸ್ತುಗಳಿಂದ ಉಪಯೋಗವಿಲ್ಲವೆಂದು ತಮಗಾದಷ್ಟು ದುಡ್ಡನ್ನು ಕೊಟ್ಟು ಅಭಿನಂದಿಸುವ ಮಂದಿಯೂ ಕಡಿಮೆಯಿಲ್ಲ.

ಪ್ರತಿಕ್ರಿಯಿಸಿ: feedback@sudha.co.in